ಒಂದು ಕ್ರೈಂ ಥ್ರಿಲ್ಲರ್ ಸಿನಿಮಾ ಮಾಡಬೇಕು, ಅದಕ್ಕೆ ಒಂದು ಕತೆ ಬರೆದುಕೊಡು ಎಂದಿದ್ದ. ಸುಮಾರು ಹದಿನೈದು ದಿನಗಳಿಂದ ಪ್ರಯತ್ನ ಮಾಡುತ್ತಿದ್ದೇನೆ. ಸರಿಯಾದ ಕತೆ ಸಿಗುತ್ತಿಲ್ಲ. ಅದೇ ಯೋಚನೆ. ಇಲ್ಲದಿದ್ದರೆ ನಿಮ್ಮ ಜೊತೆ ಇನ್ನೂ ಸ್ವಲ್ಪ ಹೊತ್ತು ಕಾಲ ಕಳೆಯುತ್ತಿದ್ದೆ. ನಿಮಗೇನಾದರೂ ಬೇಕಿದ್ದರೆ ಸಂಕೋಚವಿಲ್ಲದೆ ಕೇಳಿ" ಎಂದ.

ಭಾರವಾದ ಹೆಜ್ಜೆಗಳನ್ನು ಇಡುತ್ತಾ ನಾಗರಾಜಯ್ಯ ಬಾಗಿಲೆಡೆ ನಡೆದ. ಬಾಗಿಲ ಹಿಡಿಗೆ ಕೈ ಹಾಕುತ್ತಾ ತಿರುಗಿ, "ಸಾರ್, ಒಬ್ಬ ಬರಹಗಾರ ಸತ್ಯಾಂಶ ಇಟ್ಟುಕೊಂಡು ಬರೆದರೆ ವಾಸ್ತವಕ್ಕೆ ಹತ್ತಿರವಾಗಿ ಬರೆಯಬಲ್ಲ. ಅದನ್ನು ಸಿನಿಮಾ ಮಾಡಿದರೆ ಜನ ನೋಡುವುದರಲ್ಲಿ ಸಂಶಯವೇ ಇಲ್ಲ ಅಲ್ಲವಾ?" ಕೇಳಿದ. ಅವನ ಧ್ವನಿಯಲ್ಲಿರುವುದು ವ್ಯಂಗ್ಯವಾ ಅಥವಾ ತನ್ನನ್ನು ಹಣಿಯಲು ಮತ್ತೊಂದು ಅಸ್ತ್ರವಾ ಎಂಬುದನ್ನು ಅರಿಯದೇ, "ನೀವೇನು ಹೇಳುತ್ತಿದ್ದೀರಿ ನನಗೆ ಅರ್ಥ ಆಗುತ್ತಿಲ್ಲ. ಬಹುಶಃ ನಶೆ ಏರುತ್ತಿರಬೇಕು. ನಾಳೆ ಬನ್ನಿ" ಎಂದ.

ಅವನ ಮಾತುಗಳು ಕೇಳಲೇ ಇಲ್ಲವೇನೋ ಎಂಬಂತೆ ನಾಗರಾಜಯ್ಯ ಮತ್ತೆ ಒಳಗೆ ಬಂದ.

"ಆ ಆನಂದರಾಮ್‌ನ ಕೊಲೆಯ ಎಳೆಯನ್ನೇ ಇಟ್ಟುಕೊಂಡು ಯಾಕೆ ನೀವು ಸಿನಿಮಾ ಕತೆಯಾಗಿ ಬರೆಯಬಾರದು? ಇಡೀ ಪ್ರಸಂಗವನ್ನು ಒಟ್ಟಾರೆ ನೋಡಿದರೆ ನೀವು ಅವರ ಮೇಲೆ ತೋರಿದ್ದ ಪ್ರೀತಿ, ವಿಶ್ವಾಸ, ಅವನು ನಿಮಗೆ ಮಾಡಿದ ದ್ರೋಹ, ಅವನ ಅಫೇರ್, ಅವನ ಸಾವು, ಅದು ಕೊಲೆ ಎಂಬ ಸಂಶಯ, ನಿಮ್ಮ ಮೇಲಿನ ಅಪವಾದ ಈ ಸಂಗತಿಗಳನ್ನೆಲ್ಲಾ ಒಟ್ಟಿಗೆ ಸೇರಿಸಿ ಅವನ ಸಾವಿನ ರಹಸ್ಯ ಬಿಡಿಸುವಂತಹ ಕತೆ ಯಾಕೆ ಬರೆಯಬಾರದು?"

ಒಂದು ಕ್ಷಣ ಕಾಮತನ ಕಣ್ಣುಗಳು ಹೊಳೆದವು! ಹದಿನೈದು ದಿನಗಳಿಂದ ಯಾವ ಸಣ್ಣ ಎಳೆಯೂ ಹೊಳೆದಿರಲಿಲ್ಲ. ಆದರೆ ಇದು ತಾನೇ ಪಾತ್ರಧಾರಿ ಆಗಿದ್ದ ಕತೆ! ಹೊಸತನ! ಸಸ್ಪೆನ್ಸ್ ಎಲ್ಲ ಇರುವಂಥದ್ದು. ಆದರೂ, ಎಲ್ಲೋ ಸಣ್ಣ ಅನುಮಾನ.

"ನನಗೆ ಅರ್ಥ ಆಗುತ್ತಿಲ್ಲ. ಇಂತಹ ಕತೆಗಳು ಬಂದಿವೆ ಅಲ್ಲವಾ?" ಎಂದ.

"ಸಾರ್, ಒಬ್ಬ ಪೊಲೀಸ್ ಕೊಲೆಗಾರನನ್ನು ಹಿಡಿಯಲು ಬಯಸುತ್ತಾನೆ. ಅದು ಅವನ ಕರ್ತವ್ಯ. ಆದರೆ ತಾವು ಲೇಖಕರು, ತಮ್ಮ ಬರವಣಿಗೆಗೆ ಇರುವ ಸ್ವಾತಂತ್ರ್ಯದಿಂದ ಕೊಲೆಗಾರನನ್ನು ಬಚಾವ್ ಕೂಡಾ ಮಾಡಬಹುದು. ನಾನು ಈ ಕೇಸ್‌ನ ಪೊಲೀಸ್ ವರ್ಶನ್ ಹೇಳುತ್ತೇನೆ. ನೀವು ಕೊಲೆಗಾರನ ವರ್ಶನ್ ಬರೆಯಿರಿ. ಎರಡೂ ಸೇರಿದರೆ ಒಂದು ಅದ್ಭುತ ಸಿನಿಮಾ ಕತೆ ಆಗುವುದರಲ್ಲಿ ಸಂಶಯ ಇಲ್ಲ!"

ಕಾಮತನ ಕಣ್ಣುಗಳು ಮತ್ತೊಮ್ಮೆ ಹೊಳೆದವು. "ಫೆಂಟಾಸ್ಟಿಕ್! ಕತೆ ಹೊಳೆದಾಗ ಬರೀಬೇಕು. ಪ್ಲೀಸ್ ಒಳಗೆ ಬನ್ನಿ..." ಎಂದ.

"ನಾನೂ ಅದನ್ನೇ ಹೇಳ ಹೊರಟಿದ್ದೆ ಸಾರ್" ಎನ್ನುತ್ತಾ ಮತ್ತೆ ಧಡಕ್ಕನೆ ಸೋಫಾದಲ್ಲಿ ಕುಸಿದ. ಅಷ್ಟು ತೂಕದ ವ್ಯಕ್ತಿ ಕುಳಿತರೆ ಒಂದು ಸಣ್ಣ ಸದ್ದೂ ಆಗದಿದ್ದನ್ನು ಕಂಡು ಆಶ್ಚರ್ಯವಾದರೂ ತನ್ನ ಹದಿನೈದು ದಿನದ ಸಮಸ್ಯೆ ಮುಗಿಯಿತೆಂಬ ಹುರುಪಿನಲ್ಲಿ ಅದರೆಡೆ ಗಮನ ಹರಿಸಲಿಲ್ಲ ಕಾಮತ್.

"ಹೇಳಿ ಸಾರ್, ಆ ಆನಂದರಾಮ್‌ನ ಸಾವಿನ ಬಗ್ಗೆ ಪೊಲೀಸರ ವರ್ಶನ್" ಎನ್ನುತ್ತಾ ತನ್ನ ಲ್ಯಾಪ್‌ಟಾಪ್ ತೆರೆದು ಕುಳಿತ.

"ನಮಗೆ ಆನಂದರಾಮ್‌ನ ಅಪಾರ್ಟ್‌ಮೆಂಟ್‌ನವರು ಅವನು ಎರಡು ದಿನದಿಂದ ಕಾಣುತ್ತಿಲ್ಲ, ಅಲ್ಲದೇ ಅವನ ಮನೆಯಿಂದ ಕೆಟ್ಟ ವಾಸನೆ ಬರುತ್ತಿದೆ ಎಂದು ಫೋನ್ ಮಾಡಿದ್ದರು.